# ಮಹಿಳಾ ಸಬಲೀಕರಣದ ಸಮಸ್ಯೆ ಮತ್ತು ಸವಾಲುಗಳು

*ಶ್ರೀನಿವಾಸ.ಎಸ್.ನಲವಾಗಲ*

*ಕನ್ನಡ ಅತಿಥಿ ಉಪನ್ಯಾಸಕರು*

*ಸರ್ಕಾರಿ ಪ್ರಥಮ ದರ್ಜೆ ಕಾಲೇಜು.ಗಾಂಧಿಪುರ*

*ಜಿಲ್ಲಾ:– ಹಾವೇರಿ*

**ಪೀಠಿಕೆ :–**

ಭಾರತೀಯ ಪರಂಪರೆಯಲ್ಲಿ ಹೆಣ್ಣಿಗೆ ಬಹುಮುಖ್ಯವಾದ ಸ್ಥಾನವನ್ನು ಕೊಡಲಾಗಿದೆ. ಸಮಾಜದಲ್ಲಿ ಸ್ತ್ರೀ ಅಥವಾ ಮಹಿಳೆಗೆ ಮಾತೃ ಸ್ಥಾನವನ್ನು ಕೊಟ್ಟು ಅವಳಿಗೆ ಸಮಾಜದಲ್ಲಿ ಉನ್ನತ ಸ್ಥಾನ ದೊರಕಿದೆ. ಪ್ರಾಚೀನ ಕಾಲದಲ್ಲಿ 'ಯತ್ರ್ಯ ನಾರ್ಯಸ್ತೊ ಪೂಜ್ಯಂತೆ ತರ್ಥ ದೇವತಾ ಹೈ ' ಅಂದರೆ ಎಲ್ಲಿ ನಾರಿಯರನ್ನು ಪೂಜಿಸುತ್ತಾರೋ ಅಲ್ಲಿ ದೇವಾನುದೇವತೆಗಳು ವಾಸಿಸುತ್ತಾರೆ. ಎಂಬ ಅರ್ಥದಲ್ಲಿ ಹೇಳಲಾಗಿದೆ. ಸಮಾಜದಲ್ಲಿ ಮಹಿಳೆಗೆ ಪಂಚಮಾತೆಯರ ಸ್ಥಾನ ಪ್ರಧಾನವಾಗಿ ನೀಡಲಾಗಿದೆ. 1. ಭೂತಾಯಿ 2. ಹೆತ್ತ ತಾಯಿ 3.ಭಾರತ ಮಾತೆ 4.ಕರ್ನಾಟಕ ಮಾತೆ 5.ಗೋಮಾತೆ ಇಂತಹ ಪವಿತ್ರವಾದ ಸ್ಥಾನವನ್ನು ಮಹಿಳೆಯರಿಗೆ ನೀಡಿ ನಿಸರ್ಗದತ್ತವಾದ ನದಿಗಳಿಗೂ ಸಹಿತ ಹೆಣ್ಣಿನ ಹೆಸರನ್ನು ನೀಡಲಾಗಿದೆ. ಸಿಂಧೂ , ಗಂಗಾ , ಕಾವೇರಿ , ಸರಸ್ವತಿ , ಕಾಳಿ , ನೇತ್ರಾವತಿ , ಗೋದಾವರಿ , ನರ್ಮದಾ ಮುಂತಾದ ಹೆಸರುಗಳನ್ನು ಹೆಸರಿಸಬಹುದು.

ಸ್ತ್ರೀ ಅಥವಾ ಮಹಿಳೆ ಎಂಬ ಪದವು ಸಂಸ್ಕೃತದ್ದು . ಕನ್ನಡದಲ್ಲಿ ಈ ಪದಕ್ಕೆ 'ಹೆಣ್ಣು' ಎಂಬ ಅರ್ಥವಿದೆ. ಇದು ನಾಗರಿಕ ಗೌರವ ಮತ್ತು ಪುರುಷ ಪದದ ಸಮಾನ ಪದವಾಗಿದ್ದು ವಯಸ್ಕ ಹೆಣ್ಣನ್ನು ಸೂಚಿಸಲು ಉಪಯೋಗಿಸಲಾಗುತ್ತದೆ. ಆದಿಯಿಂದಲೂ ಸೃಷ್ಠಿಯ ಮೂಲ ಸ್ತ್ರೀಯಾಗಿದ್ದಾಳೆ.

## *ಮಹಿಳಾ ಸಬಲೀಕರಣದಲ್ಲಿ ಜನಪದ ಸಾಹಿತ್ಯದಲ್ಲಿ ಮಹಿಳೆಯ ಪಾತ್ರ.*

ಜನಪದ ಸಾಹಿತ್ಯದಲ್ಲಿ ಗ್ರಾಮೀಣ ಜನರ ಬದುಕು , ಜೀವನ ಸಂಸ್ಕೃತಿ , ನಿಸರ್ಗ , ಇವೆಲ್ಲ ಒಳಗೊಂಡಿರುತ್ತದೆ. ಜನಪದ ಸಾಹಿತ್ಯದಲ್ಲಿ ಮಹಿಳೆಗೆ ಪ್ರಮುಖ ಸ್ಥಾನ. ಮಹಿಳೆ , ಪತಿವೃತೆ , ಗರತಿ , ಉದಾರಿ , ತ್ಯಾಗಿಯ ಸ್ಥಾನದಲ್ಲಿ ಚಿತ್ರಿತಳಾಗಿದ್ದಾಳೆ. ಇವೆಲ್ಲವನ್ನು ತಾಯಿಯಾಗಿ , ಪತ್ನಿಯಾಗಿ , ಸಹೋದರಿಯಾಗಿ , ಮುತ್ತೈದೆಯಾಗಿ , ಸೊಸೆಯಾಗಿ , ದೇವತೆಯಾಗಿ , ಹಲವು ರೂಪಗಳ ಮುಖಾಂತರ ಅಭಿವ್ಯಕ್ತಳಾಗುತ್ತಾಳೆ.

*ಅತ್ತೆಮನೆಯಲ್ಲಿ ಮುತ್ತಾಗಿ ಇರಬೇಕು*

*ಹೊತ್ತಾಗಿ ನೀಡಿದರೂ ಉಣಬೇಕು ! ಮಗಳೇ*

*ತವರೀಗೆ ಹೆಸರು ತರಬೇಕು.*

ಮದುವೆಯಾದ ಮಗಳು ತಾನು ಕೊಟ್ಟ ಗಂಡನ ಮನೆಯಲ್ಲಿ ತಾಳ್ಮೆ , ಸಮಾಧಾನದಿಂದ ಮತ್ತು ಮನೆತನದ ಜವಾಬ್ದಾರಿಯಿಂದ ಬಾಳುವೆ ಮಾಡಬೇಕು. ಕುಟುಂಬದ ಎಲ್ಲಾ ಸದಸ್ಯರ ಪ್ರೀತಿಪಾತ್ರಕ್ಕೆ ಗೌರವಯುತವಾಗಿ ನಡೆದುಕೊಳ್ಳಬೇಕು. ಕೊಟ್ಟ ಮನೆಗೆ ಹೆಸರು ತರಬೇಕೆಂದು ತಾಯಿ ಮತ್ತು ತವರು ಮನೆ ಹಂಬಲಿಸುತ್ತದೆ ಎಂದು ಹೇಳಲಾಗಿದೆ.

*ತೊಟ್ಟೀಲ ಹೊತ್ಕೊಂಡು ತವರ್ಬಣ್ಣ ಉಟ್ಟುಗೊಂಡು*

*ಅಪ್ಪ ಕೊಟ್ಟೆಮ್ಮೆ ಹೊಡ್ಕಂಡು ! ತಂಗ್ಯಮ್ಮ*

*ತಿಟ್ಟೆತ್ತಿ ತಿರುಗಿ ನೋಡ್ಯಾಳ*

ಮದುವೆಯಾದ ಹೆಣ್ಣು ಮಗಳು ಹೊಸದರಲ್ಲಿ ಗಂಡನ ಮನೆಗೆ ಹೋಗುವಾಗ ಅವಳು ತೊಟ್ಟಿಲ ತೆಗೆದುಕೊಂಡು ತವರುಮನೆಯ ಸೀರೆಯುಟ್ಟುಕೊಂಡು ಸಂತಸದಿಂದ ತವರುಮನೆಯವರು ಪ್ರೀತಿಯಿಂದ ಬಳುವಳಿ ಕೊಟ್ಟ ಎಮ್ಮೆಯನ್ನು ಹೊಡೆದುಕೊಂಡು ತನ್ನ ಗಂಡನ ಮನೆಗೆ ಹೋಗುವಾಗ ತನ್ನೂರಿನಿಂದ ಸ್ವಲ್ಪ ದೂರದಲ್ಲಿ ದಿಣ್ಣೆ ಹತ್ತಿ ಮತ್ತೆ ತನ್ನ ತವರು ಮನೆಯ ಕಡೆಗೆ ನೋಡುವುದು ಮತ್ತೆ ಮತ್ತೆ ಅವಳಿಗೆ ತವರು ಮನೆಯ ನೆನಪು ಬರುವುದು ಸರ್ವೆ ಸಾಮಾನ್ಯ.

## ಮಹಿಳೆಯರ ಸಬಲೀಕರಣದ ಸಮಸ್ಯೆಗಳು

**'ಸಬಲೆ'** ಎಂಬ ಪದದ ಅರ್ಥ ಶಕ್ತಿಯುತವಾಗುವುದು ಮತ್ತು ಅಧಿಕಾರ ಹೊಂದುವುದು ಎಂಬರ್ಥದಲ್ಲಿದೆ.

- ಮಹಿಳೆಯರಲ್ಲಿ ಬೌದ್ಧಿಕ , ರಾಜಕೀಯ , ಸಾಮಾಜಿಕ , ಆರ್ಥಿಕ ಬಲವನ್ನು ಹೆಚ್ಚಿಸುವುದಕ್ಕೆ ಮಹಿಳಾ ಸಬಲೀಕರಣ ಎನ್ನುತ್ತಾರೆ.
- ಸ್ವಯಂ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಹೊಂದುವುದು.

## ಸಮಾಜದಲ್ಲಿ ಮಹಿಳೆಯರ ಸಮಸ್ಯೆಗಳು

1. **ಪುರುಷ ಪ್ರಧಾನ ಸಮಾಜ ವ್ಯವಸ್ಥೆ**
2. **ವರದಕ್ಷಿಣೆ ಕಿರುಕುಳ**
3. **ಲೈಂಗಿಕ ದೌರ್ಜನ್ಯ**
4. **ಹೆಣ್ಣು ಭ್ರೂಣ ಹತ್ಯೆ**
5. **ಕೌಟುಂಬಿಕ ದೌರ್ಜನ್ಯ**
6. **ಧರ್ಮದ ಅನಿಷ್ಟ ಪದ್ಧತಿಗಳು**
7. **ಅಪೌಷ್ಟಿಕತೆ ಮತ್ತು ಆಹಾರದ ಕೊರತೆ**
8. **ಆಧುನಿಕ ಜೀವನ ಶೈಲಿ ರೂಪಿಸಿಕೊಳ್ಳುವಿಕೆ.**

### *1.ಪುರುಷ ಪ್ರಧಾನ ಸಮಾಜ ವ್ಯವಸ್ಥೆ :-*

ಪ್ರಾಚೀನ ಕಾಲದಿಂದಲೂ ಮಹಿಳೆಯು ಪುರುಷನ ದಬ್ಬಾಳಿಕೆಯಲ್ಲಿ ನಲುಗಿ ಹೋಗಿದ್ದಾಳೆ. ಅವಳಿಗೆ ಸ್ವತಂತ್ರ ನಿರ್ಧಾರ ಕೈಗೊಳ್ಳುವುದಾಗಲಿ / ಪ್ರಕಟಿಸುವುದಾಗಲಿ ಇರಲಿಲ್ಲ ಕೇವಲ ಮಕ್ಕಳನ್ನು ಹೆರುವ ಯಂತ್ರವೆಂಬಂತೆ ಭಾವಿಸಲಾಗಿತ್ತು. ಅವಳ ಬೇಕು – ಬೇಡಗಳಿಗೂ ಆಸ್ಪದವಿರಲಿಲ್ಲಾ. ಅವಳ ಸ್ಥಿತಿ ಶೋಚನೀಯವಾಗಿತ್ತು.

### *2. ವರದಕ್ಷಿಣೆ ಕಿರುಕುಳ*

ಭಾರತೀಯ ಸಂಪ್ರದಾಯದಲ್ಲಿ ಮದುವೆಯೆಂಬ ಬಂಧನದಲ್ಲಿ ಗಂಡು – ಹೆಣ್ಣು ಬಂಧದಲ್ಲಿ ಅನುಬಂಧದಿಂದ ಕೂಡುತ್ತಾರೆ. ವರನಿಗಾಗಿ ಕೊಡುವ ಉಡುಗೊರೆಯನ್ನು ವರನ ಶ್ರೇಷ್ಟತೆಗಾಗಿ ಪುರಸ್ಕರಿಸುವ ದಕ್ಷಿಣೆಯಾಗಿ ವರದಕ್ಷಿಣೆ ಪದ್ಧತಿ ಜಾರಿಗೆ ಬಂದಿತು. ನಗದು ರೂಪದ ಹಣ , ವಸ್ತುಗಳ ರೂಪ ಹಾಗೆಯೇ ಚಿನ್ನದಂತಹ ವಸ್ತುಗಳು ವರನಿಗೆ ಕೊಡುತ್ತಿದ್ದರು. ಈಗ ಇದು ದುರಾಸೆಯ ಲೋಭಕ್ಕೆ ಒಳಗಾಗಿ ವರದಕ್ಷಿಣೆಯ ಕಿರುಕುಳ ಹೆಚ್ಚಾಗಿ ಮಹಿಳೆ ಆತ್ಮಹತ್ಯೆಯಂತಹ ಹಾದಿ ಹಿಡಿಯುತ್ತಿದ್ದಾಳೆ.

### *3.ಲೈಂಗಿಕ ದೌರ್ಜನ್ಯ*

ಹೆಣ್ಣು ಕೇವಲ ಭೋಗದ ವಸ್ತುಗಳೆಂದು ತಳಿದು ಅವಳ ಮೇಲೆ ಲೈಂಗಿಕ ದೌರ್ಜನ್ಯಗಳು ನಡೆಯುತ್ತಿವೆ. ಸಮಾಜದಲ್ಲಿ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ , ರೈಲ್ವೆ ನಿಲ್ದಾಣ , ಹಾಗೂ ಮನೆಗಳಲ್ಲಿ , ಬೀದಿಗಳಲ್ಲಿ ಹಾಗೆಯೇ ಹೆಣ್ಣು ತಾನು ಉದ್ಯೋಗ ಮಾಡುವ ಕಛೇರಿಗಳಲ್ಲಿ , ಮುಂದುವರೆದು ತನ್ನ ನೆರೆಹೊರೆಯವರು ಮುಂತಾದ ಕಡೆಗಳಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ಉದಾಹರಣೆಗೆ :- ದೆಹಲಿಯಲ್ಲಿ ನಡೆದ 'ನಿರ್ಭಯಾ' ಪ್ರಕರಣ.

### *4.ಹೆಣ್ಣು ಭ್ರೂಣದ ಹತ್ಯೆ*

ಸಮಾಜದ ಕುಟುಂಬ ವ್ಯವಸ್ಥೆಯಲ್ಲಿ 'ಹೆಣ್ಣು ಮನೆಗೆ ಮಾರಕ'ವೆಂಬ ಭಾವನೆ ಮೌಢ್ಯತೆಯಿಂದ ಕೂಡಿ ., ಹೆಣ್ಣು ಕುಟುಂಬಕ್ಕೆ ಹೊರೆಯೆಂಬ ತಾತ್ಸಾರ ಭಾವನೆಯಿಂದಾಗಿ ಹೆಣ್ಣು ಶಿಶುಗಳನ್ನು ಭ್ರೂಣ ಹತ್ಯೆ ಮಾಡುತ್ತಿದ್ದಾರೆ. ಗಂಡು ಮಕ್ಕಳು ಕುಟುಂಬಕ್ಕೆ ಆಧಾರ ಇವರಿಂದ ಸದ್ಗತಿಯೆಂಬ ಭಾವನೆಯಿಂದ ಭಾರತದಲ್ಲಿ ಭ್ರೂಣಹತ್ಯೆ ಹೆಚ್ಚಾಗುತ್ತಿದೆ.

### *5.ಕೌಟುಂಬಿಕ ದೌರ್ಜನ್ಯ*

ಕುಟುಂಬದ ಎಲ್ಲಾ ಆಗು – ಹೋಗುಗಳಲ್ಲಿ ಅವಳನ್ನು ಗುರಿಮಾಡಿ ಅವಳ ಮೇಲೆ ಕುಟುಂಬದ ಗಂಡ , ಮಾವ , ಅತ್ತೆ , ಇತ್ಯಾದಿ ಎಲ್ಲಾ ಸದಸ್ಯರು ಮಾನಸಿಕ ಕಿರುಕುಳ ನೀಡುತ್ತಿದ್ದಾರೆ. ಎಲ್ಲದಕ್ಕೂ ಇವಳೇ ಎಂಬ ಅನಿಷ್ಟವೆಂಬ ಭಾವನೆಯಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಲ್ಲೆಗೊಳಗಾಗಿದ್ದಾಳೆ.

### *6.ಧರ್ಮದ ಹೆಸರಲ್ಲಿ ಅನಿಷ್ಟ ಪದ್ಧತಿಗಳು*

ಭಾರತ ದೇಶದಲ್ಲಿ ಮಹಿಳೆಯರನ್ನು ಧರ್ಮದ ಹೆಸರಿನಲ್ಲಿ ಅನಿಷ್ಟ ಪದ್ಧತಿಯಲ್ಲಿ ಅವಳನ್ನು ಶೋಷಣೆ ಮಾಡುತ್ತಿದ್ದಾರೆ. ಅವಳನ್ನು ಮುಸ್ಲಿಂ ಸಮುದಾಯದಲ್ಲಿ ಧರ್ಮದ ಹೆಸರಿನಲ್ಲಿ **'ತಲಾಖ್'** ಎಂಬ ಅನಿಷ್ಟ ಪದ್ಧತಿಗೆ ಗುರಿಯಾಗುತ್ತಿದ್ದಾಳೆ. ಹಿಂದೂ ಧರ್ಮದಲ್ಲಿ 'ದೇವದಾಸಿ' ಪದ್ಧತಿಯಂತಹ ಕೆಟ್ಟ ಆಚರಣೆಗೆ ಮಹಿಳೆ ಬಲಿಯಾಗುತ್ತಿದ್ದಾಳೆ. ಅರೆ ಬೆತ್ತಲೆ ಸೇವೆ ಇನ್ನೂ ಮುಂತಾದ ಆಚರಣೆಯಲ್ಲಿ ಮಹಿಳೆ ನಲುಗಿ ಹೋಗಿದ್ದಾಳೆ.

### *7. ಅಪೌಷ್ಟಿಕತೆ ಮತ್ತು ಆಹಾರದ ಕೊರತೆ*

ಭಾರತ ದೇಶದಲ್ಲಿ ಶೇಕಡ ಎಪ್ಪತ್ತರಷ್ಟು ಮಹಿಳೆಯರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ತಾಯಿಯ ಎದೆ ಹಾಲು ಅಮೃತಕ್ಕೆ ಸಮಾನವೆಂಬ ಮಾತು ಜನಜನಿತವಾದುದು. ಆದರೆ ಬಡವರ್ಗದ ಮಹಿಳೆಯರಲ್ಲಿಅಪೌಷ್ಟಿಕತೆ ಕೊರತೆ ಕಣಡು ಬರುತ್ತಿದೆ.

### *8.ಆಧುನಿಕ ಜೀವನ ಶೈಲಿ*

ಮಹಿಳೆಯರು ಪೌರಾತ್ಯ ಸಂಸ್ಕೃತಿಗೆ ಮಾರು ಹೋಗಿ ತನ್ನ ಸಂಪ್ರದಾಯಿಕ ಉಡುಗೆ ತೊಡುಗೆಗಳಲ್ಲಿ , ಆಹಾರ ಕ್ರಮದಲ್ಲಿ ಬದಲಾವಣೆ ಮಾಡಿಕೊಂಡು ಭಾರವಾದ ದೇಹ ಹೋಂದಿ ಜೀವನದಲ್ಲಿ ತನ್ನ ಅಸ್ತಿತ್ವಕ್ಕಾಗಿ ಹೋರಾಟ ಮಾಡುತ್ತಿದ್ದಾಳೆ.

### *ಮಹಿಳಾ ಸಬಲೀಕರಣಕ್ಕೆ ಪರಿಹಾರ ಕ್ರಮಗಳು.*

1. ***ಕಾನೂನಾತ್ಮಕ ಕ್ರಮಗಳು***
2. ***ಸರ್ಕಾರದ ಯೋಜನೆಗಳು***
3. ***ಮಹಿಳೆಯರಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ***
4. ***ಮಹಿಳಾ ನ್ಯಾಯಾಲಯ ಸ್ಥಾಪಿಸುವುದು***
5. ***ಮಹಿಳೆಯರಿಗೆ ಉದ್ಯೋಗದಲ್ಲಿ 35% ಮೀಸಲಾತಿ ಕೊಡುವುದು.***

## *ಉಪಸಂಹಾರ :–*

ಭಾರತ ದೇಶದಲ್ಲಿ ಶತ ಶತಮಾನಗಳಿಂದಲೂ ಸ್ತ್ರೀ ಸಬಲೀಕರಣದ ಹೋರಾಟಗಳು ನಡೆಯುತ್ತಲೇ ಇವೆ. ಆದರೆ ಅದು ಪರಿಪೂರ್ಣತೆ ಪಡೆಯಲು ಸಾಧ್ಯವಾಗಿತ್ತಿಲ್ಲ. **'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ'**ಎಂಬ ಗಾದೆಯಂತೆ ಹೆಣ್ಣು ಸುಶಿಕ್ಷಿತಳಾಗಿ ಇಡೀ ಮಹಿಳಾ ಸಮುದಾಯವೇ ಇದಕ್ಕೆ ಶ್ರೀಕಾರ ಹಾಡಬೇಕಾಗಿದೆ. ಇದಕ್ಕೆ ಸಮಾಜವು ಕೂಡ ಸ್ಪಂದಿಸಬೇಕಾಗಿದೆ.

## ಗ್ರಂಥ ಋಣ :-


1. ಮಹಿಳಾ ಸಶಕ್ತೀಕರಣ : ಒಂದು ಪರಿಕಲ್ಪನೆ – ಹೇಮಲತಾ.ಎಚ್. ಎಸ್
2. ಭಾರತದಲ್ಲಿ ಮಹಿಳಾ ಅಧ್ಯಯನ – ಚ.ನ. ಶಂಕರರಾವ್
3. ಮಹಿಳಾ ಸಬಲೀಕರಣ – ಡಾ.ಎಸ್.ಡಿ.ಯೋಗರಾಜು.